# ನಡಾವಳಿ ಮತ್ತು ನೈತಿಕತೆ ನೀತಿ
# ಉಡುಗೊರೆಗಳು ಮತ್ತು ಮನರಂಜನೆ ನೀತಿ

ETHICS & LEGAL COMPLIANCE | ISSUED: May 1, 2014 – REVISED: September 21, 2021

ಸಾಮಾನ್ಯವಾಗಿ ವ್ಯಾಪಾರ ಸಹವರ್ತಿಗಳು ಪರಸ್ಪರ ಸೌಜನ್ಯ ಮತ್ತು ಗೌರವವನ್ನು ಪ್ರದರ್ಶಿಸಲು ವ್ಯಾಪಾರದ ಉಡುಗೊರೆಗಳು ಮತ್ತು ಮನರಂಜನೆ ನೀಡುವುದು ಅಥವಾ ಸ್ವೀಕರಿಸುವುದು ಸೂಕ್ತ ಮಾರ್ಗವಾಗಿದೆ. ಆದರೆ ಅವುಗಳ ಮೌಲ್ಯ ಸಮಂಜಸವಾಗಿರಬೇಕು ಮತ್ತು ವ್ಯಾಪಾರ ಅಥವಾ ಸರ್ಕಾರಿ ಕ್ರಿಯೆಯ ಮೇಲೆ ಪ್ರಭಾವ ಬೀರುವ ಉದ್ದೇಶವನ್ನು ಹೊಂದಿರಬಾರದು. ಈ ನೀತಿಯು ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್ ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪು, ವಿಭಾಗ, ಜಂಟಿ ಉದ್ಯಮಗಳು ಮತ್ತು ಜಾಗತಿಕವಾಗಿ ಇತರ ಕಾರ್ಯಾಚರಣೆಗಳಿಗೆ ಅನ್ವಯಿಸುತ್ತದೆ (ಒಟ್ಟಾರೆಯಾಗಿ, "ಮ್ಯಾಗ್ನಗೆ"). ಈ ನೀತಿಯು ಉದ್ಯೋಗಿ, ಅಧಿಕಾರಿ, ನಿರ್ದೇಶಕ, ಸಲಹೆಗಾರ ಮತ್ತು ಏಜೆಂಟರು (ಒಟ್ಟಾರೆಯಾಗಿ, “ಮ್ಯಾಗ್ನ ವ್ಯಕ್ತಿಗಳು” ) ಸೇರಿದಂತೆ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ಕಾನೂನಿನಿಂದ ನಿಷೇಧಿಸಿರುವ ಹೊರತಾಗಿ, ಮ್ಯಾಗ್ನ ವ್ಯಕ್ತಿಗಳು ವ್ಯಾಪಾರ ಸಹವರ್ತಿಗಳಿಗೆ ಮತ್ತು ಅವರಿಂದ ಸೂಕ್ತ ವ್ಯಾಪಾರ ಉಡುಗೊರೆಗಳನ್ನು ಮತ್ತು ಮನರಂಜನೆಯನ್ನು ನೀಡಬಹುದು ಮತ್ತು ಸ್ವೀಕರಿಸಬಹುದು. ಆದರೆ ಉಡುಗೊರೆಗಳು ಅಥವಾ ಮನರಂಜನೆಯ ಮೌಲ್ಯ ಸಾಧಾರಣವಾಗಿರಬೇಕು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಇರಬೇಕು. ಸಾಧಾರಣ ಪ್ರಮಾಣದಲ್ಲಿ ವ್ಯಾಪಾರ ಉಡುಗೊರೆಗಳು ಮತ್ತು ಮನರಂಜನೆಯು ಉತ್ತಮ ವ್ಯಾಪಾರ ಸಂಬಂಧಗಳನ್ನು ನಿರ್ಮಿಸುವಲ್ಲಿ ಇರುವ ಕಾನೂನುಬದ್ಧ ಸಾಧನಗಳಾಗಿವೆ. ಉದಾಹರಣೆಗೆ, ಸಾಂದರ್ಭಿಕವಾಗಿ ಊಟ, ಪ್ರಚಾರದ ವಸ್ತುಗಳು ಮತ್ತು ಕ್ರೀಡೆ ಮತ್ತು ಇತರ ಕಾರ್ಯಕ್ರಮಗಳಿಗೆ ಟಿಕೆಟ್‌ಗಳನ್ನು ಒದಗಿಸುವುದು ಅಥವಾ ಸ್ವೀಕರಿಸುವುದು ಕೆಲವು ಸಂದರ್ಭಗಳಲ್ಲಿ ಸೂಕ್ತವಾಗಿರಬಹುದು.

ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವುದು ಅಥವಾ ಮನರಂಜನೆ ಒದಗಿಸುವುದು ಸಾಮಾನ್ಯವಾಗಿ ಕೆಳಗಿನ ಸಂದರ್ಭದಲ್ಲಿ ನಮ್ಮ ನಡಾವಳಿ ಮತ್ತು ನೈತಿಕತೆ ನೀತಿಯನ್ನು ಉಲ್ಲಂಘಿಸುವುದಿಲ್ಲ. (i) ಈ ನೀತಿಯನ್ನು ಒಳಗೊಂಡಂತೆ ಸ್ವೀಕೃತ ವ್ಯಾಪಾರ ಅಭ್ಯಾಸಗಳಿಗೆ ಅನುಗುಣವಾಗಿ ನೀಡಿದಾಗ (ii) ಯಾವುದೇ ನಿರ್ಣಯ ಮಾಡುವಿಕೆಯ ಮೇಲೆ ಪ್ರಭಾವ ಬೀರಲು ಉದ್ದೇಶಿಸಿದೇ ಇರುವಾಗ, ಮತ್ತು (iii) ಅನ್ವಯವಾಗುವ ಕಾನೂನಿಗೆ ಅನುಗುಣವಾಗಿ ಇರುವಾಗ. ನಿರ್ದಿಷ್ಟ ಉಡುಗೊರೆಯನ್ನು ನೀಡುವ ಅಥವಾ ಸ್ವೀಕರಿಸುವ ಅಥವಾ ನಿರ್ದಿಷ್ಟ ಮನರಂಜನೆಯನ್ನು ಒದಗಿಸುವ ಸೂಕ್ತತೆ ಅಥವಾ ಕಾನೂನುಬದ್ಧತೆಯ ಬಗ್ಗೆ ಪ್ರಶ್ನೆಗಳನ್ನು ಹೊಂದಿರುವ ಯಾವುದೇ ಮ್ಯಾಗ್ನ ವ್ಯಕ್ತಿಯು ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರರು ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಗಳೊಂದಿಗೆ ಪರಿಶೀಲಿಸಬೇಕು.

**ಉಡುಗೊರೆಗಳು ಮತ್ತು ಮನರಂಜನೆ**” ಈ ಕೆಳಗಿನವುಗಳು ಸೇರಿದಂತೆ ಬೆಲೆ ಇರುವ ಯಾವುದೇ ವಸ್ತು/ಸೇವೆ:

- ಸರಕುಗಳು
- ಸೇವೆಗಳು
- ಊಟ ಮತ್ತು ಪಾನೀಯಗಳು
- ವಾಹನಗಳು ಅಥವಾ ಪ್ರವಾಸ ಸೌಲಭ್ಯಗಳ ಬಳಕೆ
- ಈವೆಂಟ್‌ಗಳಿಗೆ ಟಿಕೆಟ್‌ಗಳು
- ಪ್ರಯಾಣದ ವೆಚ್ಚ
- ಸಾರಿಗೆ
- ನಗದಿಗೆ ಸಮಾನವಾದ (ಉದಾಹರಣೆಗೆ ಗಿಫ್ಟ್ ಕಾರ್ಡ್‌ಗಳು ಅಥವಾ ಗಿಫ್ಟ್
- ರಿಯಾಯಿತಿಗಳು
- ಬಹುಮಾನಗಳು
- ನಗದು
- ಸಹಾಯಗಳು

# ಅನುಮತಿ ಇಲ್ಲದೆ ಇರುವಾಗ

ಉಡುಗೊರೆಗಳು ಮತ್ತು ಮನರಂಜನೆ ಎಂದಿಗೂ:

- ವ್ಯಾಪಾರ ಅಥವಾ ಸರ್ಕಾರದ ನಿರ್ಧಾರಗಳನ್ನು ಅನುಚಿತವಾಗಿ ಪ್ರಭಾವಿಸಬಾರದು;
- ಇತರರು ಅನಗತ್ಯ ಪ್ರಭಾವವನ್ನು ಗ್ರಹಿಸುವಂತೆ ಮಾಡಬಾರದು; ಅಥವಾ
- ಸಂಭಾವ್ಯ ಆಸಕ್ತಿ ಸಂಘರ್ಷವನ್ನು ರಚಿಸಬಾರದು.

ಅನುಚಿತ ವರ್ತನೆಯ ಆರೋಪಗಳ ವಿರುದ್ಧ ಮ್ಯಾಗ್ನ ಖ್ಯಾತಿಯನ್ನು ರಕ್ಷಿಸುವುದು ಪ್ರತಿಯೊಬ್ಬ ಮ್ಯಾಗ್ನ ವ್ಯಕ್ತಿಯ ಜವಾಬ್ದಾರಿಯಾಗಿದೆ. ಆದ್ದರಿಂದ ಮ್ಯಾಗ್ನ ವ್ಯಕ್ತಿಗಳು ಉಡುಗೊರೆಗಳು ಮತ್ತು ಮನರಂಜನೆ ನೀಡುವಾಗ ಅಥವಾ ಸ್ವೀಕರಿಸುವಾಗ ಕಾಳಜಿ ವಹಿಸಬೇಕು, ವ್ಯಾಪಾರ ಮತ್ತು ಸರ್ಕಾರಿ ನಿರ್ಧಾರಗಳನ್ನು ಸಮಗ್ರತೆಯೊಂದಿಗೆ ಮಾಡಲಾಗುತ್ತಿದೆ, ಅನ್ವಯವಾಗುವ ಕಾನೂನುಗಳನ್ನು ಅನುಸರಿಸಲಾಗುತ್ತಿದೆ ಮತ್ತು ಮ್ಯಾಗ್ನದ ಉತ್ತಮ ಹಿತಾಸಕ್ತಿಗಳಲ್ಲಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

# ಅನುಮತಿ ನೀಡಿದಾಗ

ಉಡುಗೊರೆಗಳು ಮತ್ತು ಮನರಂಜನೆಯನ್ನು **ಕೆಳಗಿನ ಸಂದರ್ಭಗಳಲ್ಲಿ ಮಾತ್ರ** ನೀಡಬೇಕು ಅಥವಾ ಸ್ವೀಕರಿಸಬೇಕು:

- ಅವು ಸಮಂಜಸವಾಗಿದ್ದರೆ;
- ಸಾಂದರ್ಭಿಕವಾಗಿದ್ದರೆ;
- ಸಾಧಾರಣ ಬೆಲೆ ಹೊಂದಿದ್ದರೆ; ಮತ್ತು
- ವೆಚ್ಚದ ವರದಿಗಳು ಮತ್ತು ಮ್ಯಾಗ್ನ ಪುಸ್ತಕಗಳು ಮತ್ತು ದಾಖಲೆಗಳಲ್ಲಿ ನಿಖರವಾಗಿ ಮತ್ತು ಪಾರದರ್ಶಕವಾಗಿ ದಾಖಲಿಸಲಾಗಿದ್ದರೆ.

ಕಾಲಕಾಲಕ್ಕೆ, ಆಯಾ ದೇಶದಲ್ಲಿ "ಸಾಧಾರಣ" ಮತ್ತು "ಸಮಂಜಸವಾದ" ಎಂಬುದು ಏನನ್ನು ಪ್ರತಿನಿಧಿಸುತ್ತದೆ ಎಂಬುದರ ಕುರಿತು ಹೆಚ್ಚಿನ ಮಾಹಿತಿಯೊಂದಿಗೆ ನಾವು ದೇಶ-ವಾರುಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬಹುದು ಅಂತಹ ಮಾರ್ಗಸೂಚಿಗಳನ್ನು ಹೊಂದಿರುವ ದೇಶಗಳ ಪಟ್ಟಿಗಾಗಿ, ವೇಳಾಪಟ್ಟಿ A ಅನ್ನು ನೋಡಿ.

# ಸರಿಯಾಗಿ ನಿರ್ಣಯಿಸುವುದು

ಯಾವುದು ಸ್ವೀಕಾರಾರ್ಹ ಎಂಬುದನ್ನು ನಿರ್ಧರಿಸುವುದು ನಮ್ಮ ನಿರ್ಣಯಕ್ಕೆ ಬಿಟ್ಟಿದ್ದು. ಉಡುಗೊರೆ ಅಥವಾ ಮನರಂಜನೆಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದರೆ ಮ್ಯಾಗ್ನ ಅಥವಾ ಅದರ ಉದ್ಯೋಗಿಗಳನ್ನು ಅದು ಮುಜುಗರಗೊಳಿಸಬಹುದೇ ಎಂಬುದನ್ನು ಪರಿಗಣಿಸಿ. ನಿಖರತೆಯನ್ನು ಸೂಚಿಸುವುದು ಸಂಬಂಧಪಟ್ಟ ವಿಷಯಗಳು ಮತ್ತು ಸಂದರ್ಭಗಳನ್ನು ಪರಿಗಣಿಸಿ, ಕೊಡುವುದರ ಹಿಂದಿನ ಉದ್ದೇಶವೇ ಹೊರತು ಅದರ ನಗದು ಬೆಲೆ ಎಷ್ಟು ಅನ್ನುವುದಲ್ಲ. ಸಾಮಾನ್ಯವಾಗಿ, ಹೆಚ್ಚಿನ ಬೆಲೆಯ ಉಡುಗೊರೆ ಮತ್ತು ಮನರಂಜನೆ ನೀಡಿದಾಗ ಅಥವಾ ಅವುಗಳನ್ನು ಹೆಚ್ಚು ಬಾರಿ ನೀಡಿದಾದ ಹೆಚ್ಚಿನ ಪಾರದರ್ಶಕತೆ ಬೇಕಾಗುತ್ತದೆ. ಯಾವುದೇ ರೀತಿಯ ಉಡುಗೊರೆಗಳು ಅಥವಾ ಮನರಂಜನೆಯನ್ನು ನೀಡುವುದು ಅಥವಾ ಸ್ವೀಕರಿಸುವುದು ಯಾವಾಗಲೂ ಕಾನೂನು ಮತ್ತು ಸ್ಥಳೀಯ ವ್ಯಾಪಾರ ಪದ್ಧತಿಗೆ ಅನುಗುಣವಾಗಿ ಇರಬೇಕು. ಇದರೊಂದಿಗೆ, ಮ್ಯಾಗ್ನದ ಹೆಚ್ಚಿನ ಗ್ರಾಹಕರು ತಮ್ಮ ಸ್ವಂತ ಉದ್ಯೋಗಿಗಳು ಮತ್ತು ಪೂರೈಕೆದಾರರಿಗೆ ಅನ್ವಯವಾಗುವ ಉಡುಗೊರೆಗಳು ಮತ್ತು ಮನರಂಜನೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಆಂತರಿಕ ನಿಯಮಗಳನ್ನು ಹೊಂದಿದ್ದಾರೆ. ಗ್ರಾಹಕರ ಉದ್ಯೋಗಿಗಳಿಗೆ ನೀಡುವ ಯಾವುದೇ ಉಡುಗೊರೆಗಳು ಅಥವಾ ಮನರಂಜನೆಯನ್ನು ಅನ್ವಯವಾಗುವ ಗ್ರಾಹಕರ ಆಂತರಿಕ ನಿಯಮಗಳ ಅಡಿಯಲ್ಲಿ ಅನುಮತಿಸಿದರೆ ಮಾತ್ರ ನೀಡಬೇಕು.

ಯಾವುದೇ ಸಂದರ್ಭದಲ್ಲೂ ಯಾವುದೇ ರೀತಿಯ ಉಡುಗೊರೆಗಳು ಅಥವಾ ಮನರಂಜನೆಯನ್ನು ಪೂರೈಕೆದಾರರು, ಗ್ರಾಹಕರು ಅಥವಾ ಮ್ಯಾಗ್ನ ವ್ಯವಹಾರ ನಡೆಸುವ ಇತರ ಪಾರ್ಟಿಗಳಿಂದ ವಿನಂತಿಸುವಂತಿಲ್ಲ ಅಥವಾ ಬೇಡುವಂತಿಲ್ಲ. ಇದು ನೇರ ಮತ್ತು ಉಡುಗೊರೆ ಅಥವಾ ಮನರಂಜನೆಯ ಪ್ರಸ್ತಾಪವು ಸೂಕ್ತವಾಗಿದೆ ಅಥವಾ ಅಪೇಕ್ಷಣೀಯವಾಗಿದೆ ಎಂಬ ಅಭಿಪ್ರಾಯವನ್ನು ನೀಡುವ ವಿನಂತಿಗಳನ್ನು ಒಳಗೊಳ್ಳುತ್ತದೆ .

## ಸರ್ಕಾರಿ ಅಧಿಕಾರಿಗಳು

ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆಗಳು ಮತ್ತು ಮನರಂಜನೆಯ ಯಾವುದೇ ಕೊಡುಗೆ ಅಥವಾ ನಿಬಂಧನೆಯು ಹೆಚ್ಚಿನ ಅಪಾಯಗಳನ್ನು ಒಳಗೊಂಡಿರುತ್ತದೆ ಮತ್ತು ಕಾನೂನು ಅದನ್ನು ನಿಷಿಧಿಸಿರಬಹುದು. ಸರ್ಕಾರಿ ಅಧಿಕಾರಿಗಳ ಮೇಲಿನ ವೆಚ್ಚಗಳಿಗೆ ಸಂಬಂಧಪಟ್ಟ ಅನುಸರಣೆ, ನಿಯಂತ್ರಣ ಕಾರ್ಯವಿಧಾನಕ್ಕೆ ಅನುಗುಣವಾಗಿ ನೀವು ಗುಂಪು ಅಥವಾ ಮ್ಯಾಗ್ನ ಹಿರಿಯ ನಿರ್ವಹಣಾ ತಂಡದಿಂದ ಲಿಖಿತ ಅನುಮೋದನೆ ಪಡೆದ ಹೊರತು ಸರ್ಕಾರಿ ಅಧಿಕಾರಿಗಳಿಗೆ ಎಂದಿಗೂ ಉಡುಗೊರೆಗಳು ಅಥವಾ ಮನರಂಜನೆಯನ್ನು ನೀಡಬಾರದು. ***ಇದನ್ನು ಬಹಿರಂಗಪಡಿಸಿ!*** ವ್ಯವಸ್ಥೆಯ ಮೂಲಕ) (ಲಂಚ ಮತ್ತು ಅನುಚಿತ ಪಾವತಿಗಳ ಮೇಲಿನ ಮ್ಯಾಗ್ನ ನೀತಿಯನ್ನೂ ನೋಡಿ). (Magna's Policy on Bribery and Improper Payments)

ಮ್ಯಾಗ್ನ ಮತ್ತು ಸರ್ಕಾರಿ ಸ್ವಾಮ್ಯದ ಘಟಕದ ನಡುವಿನ ಸಂಬಂಧವು ಸಂಪೂರ್ಣವಾಗಿ ವಾಣಿಜ್ಯ ಸ್ವರೂಪದ್ದಾಗಿರದ ಹೊರತು ಈ ನೀತಿ ಮತ್ತು ಲಂಚ ಮತ್ತು ಅನುಚಿತ ಪಾವತಿಗಳ ನೀತಿಯ ಉದ್ದೇಶಗಳಿಗಾಗಿ ಸರ್ಕಾರಿ ಸ್ವಾಮ್ಯದ ಅಥವಾ ನಿಯಂತ್ರಿತ ಘಟಕಗಳ ಪ್ರತಿನಿಧಿಗಳನ್ನು ಸರ್ಕಾರಿ ಅಧಿಕಾರಿಗಳು ಎಂದು ಪರಿಗಣಿಸಲಾಗುತ್ತದೆ.

ಉಡುಗೊರೆ ಅಥವಾ ಮನರಂಜನೆಯನ್ನು ನೀಡಲು ಪ್ರಸ್ತಾಪಿಸುವ ಮ್ಯಾಗ್ನ ವ್ಯಕ್ತಿಯು, ಸ್ವೀಕರಿಸುವವರು ಸರ್ಕಾರಿ ಅಧಿಕಾರಿಯೇ ಅಥವಾ ಸರ್ಕಾರಿ ಸ್ವಾಮ್ಯದ ಘಟಕದ ಉದ್ಯೋಗಿಯೇ ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

## ನಗದು (ಮತ್ತು ನಗದು ಸಮಾನ, ಉಡುಗೊರೆ ಕಾರ್ಡ್‌ಗಳಂತಹ)

ನಗದು ನೀಡುವುದನ್ನು ಅಥವಾ ಸ್ವೀಕರಿಸುವುದನ್ನು ಅಂತಹ ಉಡುಗೊರೆಗಳನ್ನು ನೀಡುವುದು ಸ್ಥಳೀಯ ಪದ್ಧತಿಯ ಅಡಿಯಲ್ಲಿ (ಉದಾ. ಜಪಾನ್ ಅಥವಾ ದಕ್ಷಿಣ ಕೊರಿಯಾ) ಸೂಕ್ತವಾಗಿರದ ಮತ್ತು ನೀವು ಪೂರ್ವ-ಅನುಮೋದನೆಯನ್ನು ಪಡೆದ ಹೊರತು (ಅಥವಾ ಗಿಫ್ಟ್ ಕಾರ್ಡ್‌ನಂತಹ ನಗದು ಸಮಾನ) ನಿಷೇಧಿಸಲಾಗಿದೆ. ಅಂತಹ ವಿನಾಯಿತಿಗೆ ಅರ್ಹತೆ ಪಡೆಯಲು, ಉಡುಗೊರೆಯನ್ನು ನೀಡಲಾಗುವ ಪ್ರದೇಶದ ಕಾನೂನು ಉಪಾಧ್ಯಕ್ಷರಿಂದ ನೀವು ಪೂರ್ವ ಲಿಖಿತ ಅನುಮೋದನೆ ಪಡೆಯಬೇಕು.

## ಉಲ್ಲಂಘನೆಗಳು

ಅನುಸರಣೆಯಾಗಬೇಕಾದ ನಿಯಮಗಳ ಉಲ್ಲಂಘನೆಗಳನ್ನು ಮ್ಯಾಗ್ನ ಸಹಿಸುವುದಿಲ್ಲ. ಅಂತಹ ಯಾವುದೇ ಉಲ್ಲಂಘನೆಯನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುವುದು ಮತ್ತು ಉದ್ಯೋಗದಿಂದ ವಜಾಗೊಳಿಸುವುದು ಸೇರಿದಂತೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಯಾರಾದರೂ ಮ್ಯಾಗ್ನ ನಡಾವಳಿ ಮತ್ತು ನೈತಿಕತೆಯ ನೀತಿಯನ್ನು ಉಲ್ಲಂಘಿಸುತ್ತಿದ್ದಾರೆ ಎಂದು ನಿಮಗೆ ತಿಳಿದಿದ್ದರೆ ಅಥವಾ ಅನುಮಾನವಿದ್ದರೆ (ಉದಾಹರಣೆಗೆ, ಯಾರೋ ಸಂಘರ್ಷವನ್ನು ಬಹಿರಂಗಪಡಿಸಿಲ್ಲ ಎಂದು ನಿಮಗೆ ತಿಳಿದಿದ್ದರೆ) ನೀವದನ್ನು (i) ನಿಮ್ಮ ಮ್ಯಾನೇಜರ್; (ii) ಗುಂಪು ಅಥವಾ ಪ್ರಾದೇಶಿಕ ಕಾರ್ಪೊರೇಟ್ ಫೈನಾನ್ಸ್ ಆಫಿಸರ್; (iii) ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ; (iv) ಮುಖ್ಯ ಅನುಸರಣೆ ಅಧಿಕಾರಿ, ಅಥವಾ (v) ಮ್ಯಾಗ್ನ ಹಾಟ್‌ಲೈನ್‌ಗೆ ವರದಿ ಮಾಡಬೇಕು.
ಪ್ರತೀಕಾರದ ಭಯವಿಲ್ಲದೆ ಸಂಭಾವ್ಯ ಉಲ್ಲಂಘನೆಗಳ ಬಗ್ಗೆ ಸಮಸ್ಯೆಯನ್ನು ವ್ಯಕ್ತಪಡಿಸಬಹುದಾದ ಸಂಸ್ಕೃತಿಯನ್ನು ಬೆಂಬಲಿಸಲು ಮ್ಯಾಗ್ನ ಸಹ ಬದ್ಧವಾಗಿದೆ. ಆ ಕಾರಣಕ್ಕಾಗಿ, ಮ್ಯಾಗ್ನದ ಪ್ರತಿಕಾರ-ವಿರೋಧಿ ನೀತಿ ಪ್ರಾಮಾಣಿಕವಾಗಿ ಮತ್ತು ಉತ್ತಮ ನಂಬಿಕೆಯಿಂದ ಸಮಸ್ಯೆಯನ್ನು ವರದಿ ಮಾಡುವವರ ವಿರುದ್ಧ ಪ್ರತೀಕಾರವನ್ನು ನಿಷೇಧಿಸುತ್ತದೆ.

## ಉಪಯುಕ್ತ ಸಲಹೆಗಳು

### *ಯಾವಾಗಲು...*

- ಉಡುಗೊರೆಗಳು ಮತ್ತು ಮನರಂಜನೆಯು ಸಮಂಜಸವಾದ, ಸಾಂದರ್ಭಿಕ ಮತ್ತು ಸಾಧಾರಣ ಮೌಲ್ಯವನ್ನು ಹೊಂದಿವೆ ಮತ್ತು ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ಸ್ಥಳೀಯ ಪದ್ಧತಿಗಳನ್ನು ಅನುಸರಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಯಾವುದು "ಸಮಂಜಸ" ಎಂಬುದನ್ನು ನಿರ್ಧರಿಸುವಲ್ಲಿ ಉತ್ತಮ ವಿವೇಚನೆಯನ್ನು ಬಳಸಿ, "ಸಾಧಾರಣ" ಎಂಬುದರ ಸ್ಥಳೀಯ ಮೌಲ್ಯವು ಸರಾಸರಿ ಸ್ಥಳೀಯ ಜೀವನಮಟ್ಟ ಮತ್ತು ಸಂಪ್ರದಾಯದ ಕಾರ್ಯವಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ.
- ನಿಮಗೆ ನೀಡಲಾಗುತ್ತಿರುವ ಉಡುಗೊರೆ ಅಥವಾ ಮನರಂಜನೆ ಸಾಧಾರಣ ಮೌಲ್ಯವನ್ನು ಮೀರಬಹುದು ಅಥವಾ ಅನುಚಿತವಾಗಿರಬಹುದು ಎಂದೆನಿಸಿದರೆ ನಿಮ್ಮ ನಿರ್ವಾಹಕರು, ಗುಂಪು ಹಿರಿಯ ನಿರ್ವಹಣಾ ಸದಸ್ಯರು ಅಥವಾ ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರರು ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಗಳ ಸಲಹೆ ಮತ್ತು ಪೂರ್ವಾನುಮತಿ ಪಡೆಯಿರಿ.

- ಉಡುಗೊರೆಗಳು ಮತ್ತು ಮನರಂಜನೆಯನ್ನು ಸಾಧ್ಯವಿರುವಲ್ಲಿ ಸಂಸ್ಥೆಗೆ ಮಾಡಲಾಗಿದೆಯೇ ಹೊರತು ವ್ಯಕ್ತಿಗೆ ಅಲ್ಲ ಎಂದು ಖಚಿತಪಡಿಸಿಕೊಳ್ಳಿ.
- ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆಗಳು ಮತ್ತು ಮನರಂಜನೆಯ ನೀಡಲು ಹೆಚ್ಚಿನ ಮಟ್ಟದ ಮತ್ತು ಕಟ್ಟುನಿಟ್ಟಾದ ನಿಯಮಗಳು ಅನ್ವಯಿಸುತ್ತವೆ ಎಂಬುದನ್ನು ನೆನಪಿಡಿ (ಲಂಚ ಮತ್ತು ಅಸಮರ್ಪಕ ಪಾವತಿಗಳ ಮ್ಯಾಗ್ನ ನೀತಿಯನ್ನು ಸಹ ನೋಡಿ). ಸರ್ಕಾರಿ ಅಧಿಕಾರಿಗಳ ಮೇಲಿನ ವೆಚ್ಚಗಳಿಗೆ ಸಂಬಂಧಪಟ್ಟ ಅನುಸರಣೆ, ನಿಯಂತ್ರಣ ಕಾರ್ಯವಿಧಾನಕ್ಕೆ ಅನುಗುಣವಾಗಿ ಯಾವುದೇ ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆ ಅಥವಾ ಮನರಂಜನೆ ನೀಡುವ ಮೊದಲು ಇದನ್ನು ಬಹಿರಂಗಪಡಿಸಿ!  ವ್ಯವಸ್ಥೆಯ ಮೂಲಕ ಅನುಮೋದನೆ ಪಡೆಯಿರಿ
- ಯಾವುದೇ ಉಡುಗೊರೆ ಅಥವಾ ಮನರಂಜನೆಯನ್ನು ನೀಡುವ ಮೊದಲು ಪ್ರಸ್ತಾವಿತ ಸ್ವೀಕರಿಸುವವರು ಸರ್ಕಾರಿ ಅಧಿಕಾರಿಯೇ ಎಂಬುದನ್ನು ಅರ್ಥಮಾಡಿಕೊಳ್ಳಲು ಮತ್ತು ಪರಿಶೀಲಿಸಲು ಪ್ರಯತ್ನಿಸಿ.
- ಉಡುಗೊರೆ ಅಥವಾ ಮನರಂಜನೆ ನೀಡುವ ಅಥವಾ ಸ್ವೀಕರಿಸುವಲ್ಲಿ ಆಸಕ್ತಿಯ ಸಂಘರ್ಷದ ಸಂಭಾವ್ಯತೆಯನ್ನು ನಿರ್ಣಯಿಸಿ.
- ಮ್ಯಾಗ್ನದ ನಡಾವಳಿ ಮತ್ತು ನೈತಿಕತೆಯ ನೀತಿ ಮತ್ತು ಈ ನೀತಿಗೆ ಅನುಗುಣವಾಗಿಲ್ಲದ ಉಡುಗೊರೆ ಅಥವಾ ಆತಿಥ್ಯದ ಯಾವುದೇ ಕೊಡುಗೆಯನ್ನು ನಯವಾಗಿ ನಿರಾಕರಿಸಲು ಸಿದ್ಧರಾಗಿರಿ.
- ಮಧ್ಯವರ್ತಿ ಅಥವಾ ಮೂರನೇ ವ್ಯಕ್ತಿಯ ಮೂಲಕ ನೀಡಿದ ಅಥವಾ ಸ್ವೀಕರಿಸಿದ ಉಡುಗೊರೆಗಳು ಅಥವಾ ಮನರಂಜನೆಯನ್ನು ನೇರವಾಗಿ ನೀಡಿದಂತೆಯೇ ಪರಿಗಣಿಸಿ.
- ಎಲ್ಲಾ ಉಡುಗೊರೆ ಮತ್ತು ಮನರಂಜನಾ ಅನುಮೋದನೆಗಳು ಮತ್ತು ನಿರಾಕರಣೆಗಳ ದಾಖಲೆಗಳನ್ನು ಇಟ್ಟುಕೊಳ್ಳಿ. ಇದಕ್ಕಾಗಿ ಅವುಗಳ ಉದ್ದೇಶ, ಪಾರ್ಟಿಗಳ ಹೆಸರುಗಳು ಮತ್ತು ಉಡುಗೊರೆ ಅಥವಾ ಮನರಂಜನೆಯ ಸ್ವರೂಪ ಮತ್ತು ಮೌಲ್ಯವನ್ನು ಗಮನದಲ್ಲಿರಲಿ.
- ಸ್ವೀಕರಿಸುವವರ ಸಂಸ್ಥೆಯಿಂದ ಆಂತರಿಕ ಅನುಮೋದನೆ ಅಗತ್ಯವಿದೆಯೇ ಎಂದು ಪರಿಗಣಿಸಿ.

*ಎಂದಿಗು…*

- ಕಾನೂನಿನಿಂದ ನಿಷೇಧಿಸಲಾದ ಉಡುಗೊರೆ ಅಥವಾ ಮನರಂಜನೆ ನೀಡಬೇಡಿ.
- ವ್ಯಾಪಾರ ಅಥವಾ ಸರ್ಕಾರದ ನಿರ್ಧಾರದ ಮೇಲೆ ಪ್ರಭಾವ ಬೀರುವ ಉಡುಗೊರೆ ಅಥವಾ ಮನರಂಜನೆಯನ್ನು ನೀಡಬೇಡಿ.
- ನ್ಯಾಯಯುತ ಮತ್ತು ಪಕ್ಷಪಾತವಿಲ್ಲದ ತೀರ್ಪನ್ನು ಚಲಾಯಿಸಲು ಕಷ್ಟವಾಗುವ, ಸಾಧಾರಣ ಮೌಲ್ಯವನ್ನು ಮೀರುವ ಅಥವಾ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ವ್ಯಾಪಾರ ಅಭ್ಯಾಸಗಳಿಗೆ ವಿರುದ್ಧವಾಗಿರುವ ಉಡುಗೊರೆ ಅಥವಾ ಮನರಂಜನೆಯನ್ನು ಸ್ವೀಕರಿಸಬೇಡಿ
- ನಿಷೇಧಿತ ಉಡುಗೊರೆಗಳು ಅಥವಾ ಮನರಂಜನೆಯನ್ನು ನೀಡಬೇಡಿ ಅಥವಾ ಸ್ವೀಕರಿಸಬೇಡಿ, ಉದಾಹರಣೆಗೆ:
  - ನಗದು ಅಥವಾ ನಗದು ಸಮಾನತೆಗಳು (ಉದಾ.ಗಿಫ್ಟ್ ಕಾರ್ಡ್‌ಗಳು, ವೈಯಕ್ತಿಕ ಚೆಕ್‌ಗಳು), ಮೇಲೆ ನಿಗದಿಪಡಿಸಿದಂತೆ ಪೂರ್ವ-ಅನುಮೋದನೆ ಹೊರತುಪಡಿಸಿ;
  - ಎಲ್ಲಾ ಉದ್ಯೋಗಿಗಳಿಗೆ ಲಭ್ಯವಿಲ್ಲದ ಉತ್ಪನ್ನ ಅಥವಾ ಸೇವೆಯ ರಿಯಾಯಿತಿಗಳು;
  - ಸೂಕ್ತವಲ್ಲದ ಸ್ವಭಾವದ ಉಡುಗೊರೆಗಳು ಅಥವಾ ಮನರಂಜನೆ ಅಥವಾ ಸೂಕ್ತವಲ್ಲದ ಸ್ಥಳಗಳಲ್ಲಿ; ಅಥವಾ
  - ಮಾನ್ಯವಾದ ವ್ಯಾಪಾರ ಉದ್ದೇಶ ಅಥವಾ ಸಂಬಂಧವನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ಉಡುಗೊರೆಗಳು ಅಥವಾ ಮನರಂಜನೆ
- ಮ್ಯಾಗ್ನ ವ್ಯಾಪಾರ ಮಾಡುವ ಪೂರೈಕೆದಾರರು, ಗ್ರಾಹಕರು ಅಥವಾ ಇತರ ಪಾರ್ಟಿಯಿಂದ ಯಾವುದೇ ರೀತಿಯ ಉಡುಗೊರೆ ಅಥವಾ ಮನರಂಜನೆಗಾಗಿ ಕೇಳಬಾರದು ಅಥವಾ ವಿನಂತಿಸಬಾರದು. ಇದು ನೇರ ಮತ್ತು ಉಡುಗೊರೆ ಅಥವಾ ಮನರಂಜನೆಯ ಪ್ರಸ್ತಾಪವು ಸೂಕ್ತವಾಗಿದೆ ಅಥವಾ ಅಪೇಕ್ಷಣೀಯವಾಗಿದೆ ಎಂಬ ಅಭಿಪ್ರಾಯವನ್ನು ನೀಡುವ ವಿನಂತಿಗಳನ್ನು ಒಳಗೊಳ್ಳುತ್ತದೆ .
- ಮ್ಯಾಗ್ನ ಅವರ ನಡಾವಳಿ ಮತ್ತು ನೈತಿಕತೆಯ ನೀತಿ ಅಥವಾ ಈ ನೀತಿಯನ್ನು ಅನುಸರಿಸುವುದನ್ನು ತಪ್ಪಿಸಲು ವೈಯಕ್ತಿಕವಾಗಿ ಉಡುಗೊರೆ ಅಥವಾ ಮನರಂಜನೆಗಾಗಿ ಪಾವತಿಸಬಾರದು.

## ಇವುಗಳ ಬಗ್ಗೆ ಎಚ್ಚರದಿಂದಿರಿ…

- ಮ್ಯಾಗ್ನದ ಪ್ರತಿಸ್ಪರ್ಧಿಗಳ ಪ್ರತಿನಿಧಿಗಳೊಂದಿಗೆ ಉಡುಗೊರೆಗಳು ಅಥವಾ ಮನರಂಜನೆಯನ್ನು ವಿನಿಮಯ ಮಾಡಿಕೊಳ್ಳುವುದು. ಏಕೆಂದರೆ ಅಂತಹ ಕ್ರಿಯೆಯು ನಿಜವಾದ ಅಥವಾ ಗ್ರಹಿಸಿದ ಆಸಕ್ತಿಯ ಸಂಘರ್ಷವನ್ನು ಉಂಟುಮಾಡಬಹುದು ಅಥವಾ ಸ್ಪರ್ಧಾ-ವಿರೋಧಿ ನಡವಳಿಕೆಯ ಅನಿಸಿಕೆ ನೀಡಬಹುದು.

- ಒಪ್ಪಂದದ ಟೆಂಡರ್, ಸಮಾಲೋಚನೆ ಅಥವಾ ಪ್ರಶಸ್ತಿಯ ಸಮಯದಲ್ಲಿ (ಉದಾ. RFQ, RFP) ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ ಉಡುಗೊರೆಗಳು ಅಥವಾ ಮನರಂಜನೆಯನ್ನು ಸ್ವೀಕರಿಸುವುದು ಅಥವಾ ನೀಡುವುದು. ಇದು ಮ್ಯಾಗ್ನಗಾಗಿ ಕಾರ್ಯನಿರ್ವಹಿಸುವ ಸಲಹೆಗಾರರು ಅಥವಾ ಸಲಹೆಗಾರರು ಒದಗಿಸುವ ಕೆಲಸದ ಸಮಯದ ಊಟವನ್ನು ಒಳಗೊಂಡಿಲ್ಲ.

## ಹೆಚ್ಚಿನ ಮಾಹಿತಿಗಾಗಿ

ಹೆಚ್ಚಿನ ಮಾಹಿತಿಗಾಗಿ ಅಥವಾ ಸಲಹೆಗಾಗಿ, ದಯವಿಟ್ಟು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, ಪ್ರಾದೇಶಿಕ ಅನುಸರಣೆ ಅಧಿಕಾರಿ ಅಥವಾ Magnaದ ನೈತಿಕತೆ ಉಪಾಧ್ಯಕ್ಷರು ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳನ್ನು ಸಂಪರ್ಕಿಸಿ.

| | |
|---|---|
| Issued: | May 1, 2014 |
| Revised: | September 21, 2021 |
| Next Review: | Q3 2024 |
| Issued By: | Ethics & Legal Compliance |
| Approved By: | Magna Compliance Council |

## ಶೆಡ್ಯೂಲ್ A - ಈ ನೀತಿಯ ಅಡಿಯಲ್ಲಿ ಮಾರ್ಗಸೂಚಿಗಳನ್ನು ಹೊಂದಿರುವ ದೇಶಗಳು

ಚೀನಾ